**MVC 339-24** **PW :1**

**ಸತ್ಯ ಪ್ರತಿಜ್ಞೆ ಮೇರೆಗೆ ದಿನಾಂಕಃ 28.08.2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ ಎದುರುದಾರ ಪರ ಶ್ರೀಮತಿ A S D, ವಕೀಲರಿಂದಃ**

ನಾನು 12 ನೇ ತರಗತಿವರೆಗೆ ವ್ಯಾಸಂಗ ಮಾಡಿದ್ದೇನೆ. ನಾನು ಕಟಿಂಗ ಕೆಲಸ ಮಾಡುತ್ತೇನೆ. ಒಂದು ತಿಂಗಳಿಗೆ 30 ಸಾವಿರ ರೂ. ದುಡಿಯುತ್ತೇನೆ. ನನ್ನ ತಾಯಿ ಅಪಘಾತ ದಲ್ಲಿ ಮರಣ ಹೊಂದಿದ್ದಾರೆ. ನಾನು ವಂಶಾವಳಿ ಹಾಜರಪಡಿಸಿಲ್ಲ. ಅಪಘಾತ ದ ಬಗ್ಗೆ ಪೋಲಿಸರು ಮಾಹಿತಿ ನೀಡಿದ್ದಾರೆ. ನನ್ನ ತಮ್ಮ ಕುಮಾರ ಪೋಲಿಸರಿಗೆ ದೂರು ನೀಡಿದ್ದಾನೆ. ಆನಂದ ನಮ್ಮ ಅಣ್ಣ. ಆನಂದ ನಮ್ಮ ತಾಯಿಯ ತಂಗಿ ಮಗ. ಪೋಲಿಸರಿಗೆ ಆನಂದ ದೂರು ನೀಡಿದ್ದಾನೆ ಅಂದರೆ ಸರಿ. ನಮ್ಮ ತಮ್ಮ ತಾಯಿಯನ್ನು ಕರೆದುಕೊಂಡು ಹೋಗುವಾಗ ಸ್ಕಿಡ್ಡಾಗಿ ಬಿದ್ದಿರುತ್ತಾರೆ. ನಮ್ಮ ತಮ್ಮನ ಡಿ ಎಲ್ ಹಾಜರಪಡಿಸಿದ್ದೇನೆ. ಈಗ ನನ್ನ ತಮ್ಮ ಹೈದರಬಾದದಲ್ಲಿ ಕೆಲಸ ಮಾಡುತ್ತಾನೆ. ನನ್ನ ತಮ್ಮ ತಿಂಗಳಿಗೆ 20-30 ಸಾವಿರ ಗಳಿಸುತ್ತಾನೆ. ನಮ್ಮ ತಾಯಿಯ ಮೇಲೆ ಅವಲಂಬನೆ ಇಲ್ಲ ಅಂದರೆ ಸರಿಯಲ್ಲ. ನಮ್ಮ ತಾಯಿ ಬೇಳೆ ಮಿಲ್ ದಲ್ಲಿ ಕೆಲಸ ಮಾಡುತ್ತಿದ್ದಳು. ನಮ್ಮ ತಾಯಿಗೆ ಇ ಎಸ್ ಐ ಸೌಲಭ್ಯ ಇತ್ತು. ಆಸ್ಪತ್ರೆಯ ಬಿಲ್ ನ್ನು ಇ ಎಸ್ ಐ ದವರು ಕೊಟ್ಟಿದ್ದಾರೆ ಅಂದರೆ ಸರಿಯಲ್ಲ. ನಮ್ಮ ತಾಯಿಗೆ ಇ ಎಸ್ ಐ ಸೌಲಭ್ಯವಿದೆ.

**ಮುಂದಿನ ಪಾಟೀ ಸವಾಲಿಗೆ ಪ್ರಕರಣವನ್ನು ಮುಂದೂಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೆ.ಸ.ಎ. ಒಪ್ಪಿಕೊಳ್ಳಲಾಯಿತು.

ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು
ಹಾಗೂ ಜೆ ಎಂ ಎಫ್ ಸಿ, ಹುಬ್ಬಳ್ಳಿ.